‘ಇನ್ನೇನು ಮೂರುಗಂಟೆ ಆಗ್ತಾ ಇದೆ. ಈಗಂತೂ ಪಟ್ಟಣದಿಂದ ಇಲ್ಲಿಗೆ ಯಾವ ಬಸ್ಸೂ ಇಲ್ಲ. ಇನ್ನು ಅವನಲ್ಲಿ ಬರ್ತಾನೆ? ಇವಳೆಲ್ಲಿ ಓಡಿಹೋಗಲು ಸಾಧ್ಯ? ನೀವು ಒಳಗಡೆ ಬಂದು ನೆಂಟರ ಜೊತೆ ಕೂರಬಾರ್ದಾ. ಅವರಾದ್ರೂ ಏನಂದ್ಕೊಂಡಾರು’ ಭಾಗ್ಯ ಬಡಬಡಿಸುತ್ತಾಳೆ.

‘ಅದಕ್ಕೇ ನಿನ್ನ ಪೆದ್ದು ಅನ್ನೋದು. ಗಂಡು ಹೆಣ್ಣುಗಳನ್ನ, ಶಾಸ್ತ್ರಿಗಳನ್ನ, ಕೆಲವರನ್ನ ಬಿಟ್ಟರೆ ಯಾರೇ ಎದ್ದಿದ್ದಾರೆ? ಎಲ್ಲಾ ಎಂದೋ ಹಾಸಿಗೆ ಸೇರಿಯಾಯ್ತು. ನನ್ನ ಕಡೆ ಯಾರಿಗಿದೆಯೆ ನಿಗಾ? ಆದರೂ ಭಾಗ್ಯ, ಮಧ್ಯರಾತ್ರಿ ಆಯ್ತು ಅಂತ ಅಲಕ್ಷ್ಯ ಮಾಡ್ತಾರೇನೆ. ಬಸ್ಸಿನಲ್ಲಲ್ಲದಿದ್ದರೂ ಕಾರಿನಲ್ಲಿ ಬರಬಹುದು. ಆ ಬಡ್ಡಿ ಮಗ ಏನು ಮಾಡೋಕೂ ಹೇಸೋನಲ್ಲ. ಇವಳೂ ಅಷ್ಟೆ. ಹಟವೇ ಮಾಡದೆ ಈ ಮದುವೆಗೆ ಒಪ್ಪಿಕೊಂಡಾಗಲೇ ನನಗೆ ಅನುಮಾನ. ಅವಳು–ಇವಳು ಸೇರಿ ಏನೋ ಆಟಹೂಡಿದ್ದಾರೆ, ಭಾಗ್ಯ. ಹುಷಾರಿ ಕಣೆ’ ಎಚ್ಚರಿಸುತ್ತೇನೆ. ಅವಳ ಬೇಜವಾಬ್ದಾರಿಯ ಬಗ್ಗೆ ಕೋಪವೂ ಬರುತ್ತದೆ.

‘ಆಯಿತ್ತ್ವೇಳಿ. ಪಕ್ಕದಲ್ಲೇ ಅವಳ ಅಕ್ಕ ಇದಾಳೆ. ಸ್ನೇಹಿತೆಯರಿದಾರೆ... ನಾನಿದ್ದೇನೆ. ಹೊರಗಡೆ ನೀವಿದ್ದೀರ ಧೈರ್ಯವಾಗಿರಿ. ಗುರುರಾಯರಿಗೆ ರಥೋತ್ಸವ ಮಾಡಿಸ್ತೀನಿ ಅಂತ ಹರಕೆ ಹೊತ್ತಿದ್ದೀನಿ’ ಭಾಗ್ಯ ಧೈರ್ಯ ಹೇಳುತ್ತಾಳೆ.

ಸಿಗರೇಟ್ ಹಚ್ಚಿಕೊಂಡು ಅಂಗಳಕ್ಕೆ ಬರುತ್ತೇನೆ. ಕತ್ತಲು, ಮಳೆ ನಿಂತಿದೆ. ಸಿಗರೇಟ್ ಬೆಳಕಿನಲ್ಲಿ ವಾಚ್ ನೋಡುತ್ತೇನೆ. ಗಂಟೆ ಮೂರೂವರೆಯಾಗುತ್ತಿದೆ. ಬೆಳಿಗ್ಗೆ ಆರರಿಂದ ಏಳರವರೆಗಿನ ಮುಹೂರ್ತ. ಅಷ್ಟರಲ್ಲಿ ಆ ಖದೀಮ ಬರೋದು ತಪ್ಪಿದರೆ ಗೆದ್ದಂತೆಯೇ. ಅವನೇನು ಮೂರೂ ಬಿಟ್ಟವನು. ಗಂಡಿನ ಪಕ್ಕದಲ್ಲಿದ್ದವಳನ್ನ ಎಳಿಸಿ ಕರೆದೊಯ್ಯಲೂ ಅಂಜದವ. ಜೊತೆಗೆ ಗೂಂಡಾಗಳೇ ಅವನ ಗೆಳೆಯರು. ಗಂಡಿನ ಎದುರಿನಲ್ಲೇ ಅವಳಿಗೆ ತಾಳಿ ಕಟ್ಟಲೂ ಹೇಸದಂತಹ ಧೂರ್ತ. ಕಂಡವರ ಮನೆ ಹೆಣ್ಣುಮಕ್ಕಳನ್ನು ಬಲೆಗೆ ಹಾಕಿಕೊಳ್ಳುವ ವಿದ್ಯೆ ಧೂರ್ತನಿಗಲ್ಲದೆ ಮತ್ತಿನ್ನ್ಯಾರಿಗೆ ಕರಗತವಾಗಲು ಸಾಧ್ಯ. ಕೈನಲ್ಲೊಂದು ಪತ್ರಿಕೆ ಇದೆ ಅಂತ ಆಡಿದ್ದೇ ಆಟ. ಯಾರು ಓದ್ತಾರೆ ಇವನ ಪತ್ರಿಕೆಯನ್ನ? ‘ಜಿಲ್ಲೆಯ ಖ್ಯಾತ ಲಂಚಕೋರ’ ಎಂಬ ತಲೆಬರಹದಡಿ ಲೇಖನ ಬರೆದು ನನ್ನ ಖಾಸಗಿ ವ್ಯವಹಾರಗಳನ್ನು ಬಯಲಿಗೆಳೆದ. ಹೆಸರನ್ನೂ ಅಚ್ಚು ಹಾಕಿ ಮಾನ ತೆಗೆದ, ರ್‍ಯಾಸ್ಕಲ್. ಗೆಳೆಯ ಇನ್ಸ್‌ಪೆಕ್ಟರನೊಂದಿಗೆ ಅವನ ಪತ್ರಿಕಾಲಯಕ್ಕೆ ಬೆದರಿಕೆ ಹಾಕಲು ಹೋದರೆ, ಇದರ ಬಗ್ಗೆ ನನ್ನ ಮಗಳೇ ಬರೆದುಕೊಟ್ಟ ಲೇಖನ, ಇತರೆ ಸಾಕ್ಷ್ಯಾಧಾರಗಳನ್ನು ಮುಂದಿಡುವುದರೊಂದಿಗೆ ಕಟಕಿಯಾಡಿ ಮುಖಭಂಗ ಮಾಡಿದ್ದ. ‘ಬರಹಗಾರರ ಹಗೆಬೇಡ’ ಅಂತ ಸರ್ವಜ್ಞನೇ ಹೇಳಿದಾನೆ ಸಾರ್... ಟೇಕ್ ಇಟ್ ಈಸಿ’ ಎಂದು ಇನ್ಸ್‌ಪೆಕ್ಟರ್ ನನಗೇ ಸಮಾಧಾನ ಹೇಳಿದ್ದರು. ಅವನಿಗೆ ಯಾವ ಜಾಹಿರಾತೂ ಸಿಗದಂತೆ ಮಾಡಿದ ಮೇಲೆಯೇ ನನಗೆ ಸಮಾಧಾನವಾದದ್ದು. ಆದರೂ ಪತ್ರಿಕೆ ನಡೆಸುತ್ತಿದ್ದಾನೆ, ಭಂಡ. ಅವನು ಹಾಳಾಗಲಿ, ಇವಳಿಗೇನಾಗಿದೆ? ನನ್ನ ವಿರುದ್ಧವೇ ಬರೆದುಕೊಟ್ಟು ಅವನ ಶಹಭಾಸ್‌ಗಿರಿ ಪಡೆಯಲು. ಎಂಥ ದುರಂತ– ತಂದೆಯ ಮಾನ ಮರ್ಯಾದೆ ಇವಳದ್ದೂ ಅಲ್ಲವೆ? ಚಿಕ್ಕಂದಿನಲ್ಲಿ ಇವಳಿಗೆ ನಾಯಿ ಕೆಮ್ಮಲು ಹತ್ತಿ ಕಣ್ಣು ಕಣ್ಣು ಬಿಡುವಾಗ ಎಷ್ಟೊಂದು ಖರ್ಚು ಮಾಡಿ ಉಳಿಸಿಕೊಂಡಿದ್ದೆ. ಮಾತನಾಡಲೂ ತ್ರಾಣವಿಲ್ಲದಷ್ಟು ‘ವೀಕ್’ ಆಗಿ ಬೆಳೆದವಳ ಬಾಯಿಗೆ ಈಗ ನಾನೇ ಬಲಿ ಆಗುತ್ತಿದ್ದೇನೆ! ಇಂಥವರ ಮಗಳು ಅಂತ ಹೇಳಿಕೊಳ್ಳೋದೇ ಇವಳಿಗೆ ಹೇಸಿಗೆಯಂತೆ. ‘ಇನ್ನಾದರೂ ಪ್ರಾಮಾಣಿಕವಾಗಿ ಬಾಳೋದು ಕಲಿಯಣ್ಣ. ಕಂಡೋರನ್ನ ಸುಲಿದು ಬಂಗಲೇಲಿ ಬಾಳೋದಕ್ಕಿಂತ ಬಡವರಿಗೆ ಕೈಲಾದ ಉಪಕಾರ ಮಾಡಿ